# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 978 (1032) |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 12.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಡ್ಯಾಂಗಳ ನಿರ್ವಹಣೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ವೆಷ್ಟು (ಡ್ಯಾಂಗಳ ಪ್ರಕಾರ ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 231 ಡ್ಯಾಂಗಳಿದ್ದು, ಜಲಸಂಪನ್ಮೂಲ ಇಲಾಖೆಗೆ ಒಟ್ಟು 73 ಡ್ಯಾಂಗಳು ಒಳಪಡುತ್ತವೆ. ಈ ಜಲಾಶಯಗಳ ನಿರ್ವಹಣೆಯನ್ನು ಇಲಾಖೆಯ 04 ನಿಗಮಗಳು ಕೈಗೊಳ್ಳುತ್ತಿದ್ದು, ವಿವರಗಳು ಈ ಕೆಳಗಿನಂತಿದೆ:<br>1. ಕರ್ನಾಟಕ ನೀರಾವರಿ ನಿಗಮ ನಿಯಮಿತದಡಿ ಬರುವ ಡ್ಯಾಂಗಳವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.<br>2. ಕಾವೇರಿ ನೀರಾವರಿ ನಿಗಮ ನಿಯಮಿತದಡಿ ಬರುವ ಡ್ಯಾಂಗಳವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.<br>3. ಕೃಷ್ಣಾ ಭಾಗ್ಯ ಜಲ ನಿಗಮದ ಕಾರ್ಯವ್ಯಾಪ್ತಿಗೆ ಆಲಮಟ್ಟಿ ಅಣೆಕಟ್ಟು (ಲಾಲ್ ಬಹಾದ್ದೂರ ಶಾಸ್ತ್ರಿ ಸಾಗರ) ಹಾಗೂ ನಾರಾಯಣಪುರ ಅಣೆಕಟ್ಟು (ಬಸವಸಾಗರ) ಒಳಪಟ್ಟಿದ್ದು, ಆಲಮಟ್ಟಿ ಅಣೆಕಟ್ಟೆಯ ನಿರ್ವಹಣೆಗಾಗಿ 2025-26ನೇ ಸಾಲಿನಲ್ಲಿ 02 ಸಂಖ್ಯೆಯ ಕಾಮಗಾರಿಗಳಿಗಾಗಿ ರೂ.3.10 ಕೋಟಿ ಮೊತ್ತದ ಹಾಗೂ ನಾರಾಯಣಪೂರ ಜಲಾಶಯದ ನಿರ್ವಹಣೆಗಾಗಿ 2025-26ನೇ ಸಾಲಿನಲ್ಲಿ 15 ಸಂಖ್ಯೆಯ ಕಾಮಗಾರಿಗಳಿಗಾಗಿ ರೂ.9.99 ಕೋಟಿ ಮೊತ್ತದ ಅನುದಾನವನ್ನು ನಿಗಧಿಪಡಿಸಲಾಗಿದೆ.<br>4. ವಿಶ್ವೇಶ್ವರಯ್ಯ ಜಲ ನಿಗಮದ ವ್ಯಾಪ್ತಿಯಲ್ಲಿ ವಾಣಿ ವಿಲಾಸ ಸಾಗರ ಜಲಾಶಯ ಮತ್ತು ಗಾಯತ್ರಿ ಜಲಾಶಯಗಳ ನಿರ್ವಹಣೆಗೆ 2701 ಆರ್ & ಎಂ ಯೋಜನೆಯಡಿ 2025-26ನೇ ಸಾಲಿನಲ್ಲಿ ಕ್ರಮವಾಗಿ ರೂ.1.71 ಕೋಟಿ ಮತ್ತು ರೂ.0.20 ಕೋಟಿಗಳ ಅನುದಾನ ಹಂಚಿಕೆಯಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ರಾಜ್ಯದಲ್ಲಿರುವ ಡ್ಯಾಂಗಳ ಕ್ರಸ್ಟ್ ಗೇಟ್‌ಗಳ ನಿರ್ವಹಣೆಗೆ ತಗಲುತ್ತಿರುವ ವೆಚ್ಚವೆಷ್ಟು; ಕ್ರಸ್ಟ್‌ಗೇಟುಗಳು ಕೆಲಸ ಮಾಡದೆ ಸ್ಥಗಿತಗೊಂಡಿರುವ ಡ್ಯಾಂಗಳು ಎಷ್ಟು; | ಜಲಸಂಪನ್ಮೂಲ ಇಲಾಖೆಯ 4 ನಿಗಮಗಳಿಗೆ 2025-26ನೇ ಸಾಲಿನ ಆಯವ್ಯಯದಲ್ಲಿ ನಿರ್ವಹಣೆ ಲೆಕ್ಕಶೀರ್ಷಿಕೆಯಡಿ ರೂ.33.22 ಕೋಟಿ ಹಾಗೂ DRIP (Dam Rehabilitation and Improvement Program) ಲೆಕ್ಕ ಶೀರ್ಷಿಕೆಯಡಿ ರೂ.88.00 ಕೋಟಿ ಮೊತ್ತವನ್ನು ಹಂಚಿಕೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ಡ್ಯಾಂಗಳ ನಿರ್ವಹಣೆಯ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಕ್ರಸ್ಟ್‌ಗೇಟುಗಳು ಕೆಲಸ ಮಾಡದೆ ಸ್ಥಗಿತಗೊಂಡಿರುವ ಡ್ಯಾಂಗಳು ಯಾವುದು ಇರುವುದಿಲ್ಲ. |
| ಇ) | ಇಲ್ಲಿಯವರೆಗೆ ರೈತರಿಗೆ ಎಷ್ಟು ಟಿಎಂಸಿ ನೀರು ಬಿಡುಗಡೆ ಮಾಡಲಾಗಿದೆ; ಆದರಿಂದ ಸುದುಪಯೋಗ ಪಡೆದ ರೈತರ ಸಂಖ್ಯೆ ಎಷ್ಟು (ಸಂಪೂರ್ಣ ಮಾಹಿತಿ ಡ್ಯಾಂ ಪ್ರಕಾರ ನೀಡುವುದು) | ಜಲಸಂಪನ್ಮೂಲ ಇಲಾಖೆಯ ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾವೇರಿ ನೀರಾವರಿ ನಿಗಮ ನಿಯಮಿತ ಹಾಗೂ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಡಿ ಬರುವ ಡ್ಯಾಂಗಳವಾರು ಮಾಹಿತಿಯನ್ನು ಕ್ರಮವಾಗಿ ಅನುಬಂಧ-3, 4 & 5 ರಲ್ಲಿ ಒದಗಿಸಲಾಗಿದೆ.<br><br>ವಿಶ್ವೇಶ್ವರಯ್ಯ ಜಲ ನಿಗಮದ ವ್ಯಾಪ್ತಿಯಲ್ಲಿ ಬರುವ ವಿ.ವಿ ಸಾಗರ ಜಲಾಶಯದಿಂದ ಪ್ರಸಕ್ತ 2025-26ನೇ ಸಾಲಿನಲ್ಲಿ ರೈತರಿಗೆ ಒಂದು ಬಾರಿ 1.5 ಟಿ.ಎಂ.ಸಿ (ದಿನಾಂಕ :27.06.2025 ರಿಂದ 26.07.2025) ನೀರು ಬಿಡುಗಡೆ ಮಾಡಲಾಗಿದೆ. ಇದರಿಂದ ಸದುಪಯೋಗ ಪಡೆದ ರೈತರ ಸಂಖ್ಯೆ 19,846 ಹಾಗೂ ಎರಡನೇ ಬಾರಿಗೆ ದಿನಾಂಕ :13.02.2026 ರಿಂದ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹರಿಸಲಾಗುತ್ತಿದೆ.<br><br>ಗಾಯತ್ರಿ ಜಲಾಶಯದಡಿ ಪ್ರಸಕ್ತ 2025-26 ಸಾಲಿನಲ್ಲಿ ಮೊದಲನೇ ಬಾರಿಗೆ ದಿನಾಂಕ :27.02.2026 ರಿಂದ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹರಿಸಲಾಗುತ್ತಿದೆ. |
| ಈ) | ರಾಜ್ಯದಲ್ಲಿ ಎಷ್ಟು ಕ್ರಸ್ಟ್ ಗೇಟ್‌ಗಳನ್ನು ಬದಲಾವಣೆ ಮಾಡಬೇಕು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು; (ಸಂಪೂರ್ಣ ವಿವರ ನೀಡುವುದು) | ✓ **ಹಿಪ್ಪರಗಿ ಬ್ಯಾರೇಜ್:** 2025-26ನೇ ಸಾಲಿನಲ್ಲಿ ಹಿಪ್ಪರಗಿ ಬ್ಯಾರೇಜಿನ ಗೇಟ್ ನಂ.22 ಹಾಳಾಗಿರುವುದರಿಂದ ಗೇಟನ್ನು ಬದಲಾಯಿಸಲು ರೂ.1.40 ಕೋಟಿ ಮೊತ್ತದಲ್ಲಿ ಕಾಮಗಾರಿಯನ್ನು ಕೈಗೊಂಡಿದ್ದು, ಮಾರ್ಚ್-2026 ರ ಅಂತ್ಯದ ಒಳಗೆ ಹೊಸ ಗೇಟನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.<br><br>✓ **ತುಂಗಭದ್ರಾ:-** ತುಂಗಭದ್ರಾ ಅಣೆಕಟ್ಟಿನಲ್ಲಿ ಒಟ್ಟು 33 ಗೇಟುಗಳಿದ್ದು, ಸದರಿ ಗೇಟುಗಳನ್ನು ಬದಲಾಯಿಸುವ ಕಾಮಗಾರಿಗಳನ್ನು ಒಟ್ಟು ರೂ.53.82 ಕೋಟಿಗಳಿಗೆ ತುಂಗಭದ್ರಾ ಮಂಡಳಿಯಿಂದ ಕೈಗೆತ್ತಿಕೊಳ್ಳಲಾಗಿರುತ್ತದೆ. ಇದರಲ್ಲಿ ನೀರಿನಲ್ಲಿ ಕೊಚ್ಚಿಹೊದ ಗೇಟ್ ಸಂ:19 ಮತ್ತು ಉಳಿದ 32 ಗೇಟ್ ಗಳಿಗೆ ತುಂಗಭದ್ರಾ ಮಂಡಳಿಯು ಪ್ರತ್ಯೇಕವಾಗಿ ಟೆಂಡರ್‌ಗಳನ್ನು ಆಹ್ವಾನಿಸಿ ಅಂತಿಮಗೊಳಿಸಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಗೇಟ್ ಸಂ:19 ಕಾಮಗಾರಿಗೆ ಮತ್ತು ಉಳಿದ 32 ಗೇಟುಗಳನ್ನು ಬದಲಾಯಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಎಲ್ಲಾ ಗೇಟುಗಳ ಅಳವಡಿಕೆಯು ಜೂನ್ ತಿಂಗಳಾಂತ್ಯದಲ್ಲಿ ಪೂರ್ಣಗೊಳಿಸಲಾಗುವುದೆಂದು ತುಂಗಭದ್ರ ಮಂಡಳಿಯ ಅಧಿಕಾರಿಗಳು ತಿಳಿಸಿರುತ್ತಾರೆ.<br><br>✓ **ಹಗರಿಬೊಮ್ಮನಹಳ್ಳಿ:** ಸದರಿ ಜಲಾಶಯದ 10 ಗೇಟುಗಳ ದುರಸ್ತಿ ಕಾಮಗಾರಿಯನ್ನು ರೂ.402.74 ಲಕ್ಷಗಳಿಗೆ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಗೇಟುಗಳ ದುರಸ್ತಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br><br>ಅಣೆಕಟ್ಟುಗಳ ಕ್ರಸ್ಟ್ ಗೇಟ್‌ಗಳು, ಕಾಲುವೆಗಳು ಮತ್ತಿತರ ಯಾವುದೇ ಪರಿಕರಗಳ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳಲು, ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಕಾಯ್ದೆ-2021 ರನ್ವಯ, ವಾರ್ಷಿಕವಾಗಿ ಕೇಂದ್ರ ಜಲ ಆಯೋಗದ ಮಾರ್ಗಸೂಚಿಯನ್ವಯ Premonsoon ಹಾಗೂ Postmansoon ಪರಿವೀಕ್ಷಣೆಗಳನ್ನು ಕೈಗೊಂಡು, Dam Health Rehabilitation and Monitoring Application (DHARMA) Portal ಮೂಲಕ ನಿಗಧಿತ ಕಾಲಾವಧಿಯೊಳಗೆ ಸಲ್ಲಿಸಲಾಗುತ್ತಿದ್ದು, ಪ್ರಸ್ತುತ ನಿಗಮಗಳಡಿ ಬರುವ ಅಣೆಕಟ್ಟುಗಳ ಗೇಟುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ. |

**ಜಸಂಇ 30 ಎಂಎಲ್ಎ 2026**

**(ಡಿ.ಕೆ ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**

# ಅನುಬಂಧ-1

## ಕರ್ನಾಟಕ ನೀರಾವರಿ ನಿಗಮ ನಿಯಮಿತ

### 2025-26 ನೇ ಸಾಲಿನಲ್ಲಿ ಹಂಚಿಕೆಯಾಗಿರುವ ಅನುದಾನ (ರೂ ಲಕ್ಷಗಳಲ್ಲಿ)

| ಕ್ರ ಸಂ | ಡ್ಯಾಂಗಳ ಹೆಸರು | ಒಟ್ಟಾರೆ ನಿರ್ವಹಣೆಗೆ ನೀಡಿರುವ ಅನುದಾನ |
|---|---|---|
| 1 | ತುಂಗಾ | 472.40 |
| 2 | ಅಂಜನಾಪುರ | 40.42 |
| 3 | ಅಂಬ್ಲಿಗೋಳ | 19.20 |
| 4 | ಧರ್ಮಾ | 46.15 |
| 5 | ಹಾಯ್‌ಹೊಳೆ | 7.02 |
| 6 | ಶೀಲವಂತನಕೊಪ್ಪ ದೊಡ್ಡಕೆರೆ | - |
| 7 | ಮದಗಮಾಸೂರು | 4.29 |
| 8 | ಭದ್ರಾ | 633.42 |
| 9 | ಜಂಬದಹಳ್ಳ | 14.57 |
| 10 | ಭೀಮಸಮುದ್ರ | 7.50 |
| 11 | ಡಿ.ಬಿ. ಕೆರೆ | 25.68 |
| 12 | ವಾರಾಹಿ ಡೈವರ್ಷನ್ ವಿಯರ್ | 36.93 |
| 13 | ಅಮರ್ಜಾ | 20.00 |
| 14 | ಗಂಡೋರಿನಾಲಾ | 22.86 |
| 15 | ಬೆಣ್ಣೆತೋರಾ | 109.91 |
| 16 | ಕೆಳದಂಡೆ ಮುಲ್ಲಾಮಾರಿ | 25.45 |
| 17 | ಚೆಂದ್ರಂಪಳ್ಳಿ | 33.60 |
| 18 | ಹತ್ತಿಕುಣಿ | 1.00 |
| 19 | ಸೌದಾಗರ | 1.50 |
| 20 | ಕಾರಂಜಾ | 41.50 |
| 21 | ಚುಳಿಕಿನಾಲಾ | 48.51 |
| 22 | ಮೇಲ್ದಂಡೆ ಮುಲ್ಲಾಮಾರಿ | 20.10 |
| 23 | ಸೊನ್ನಾ ಬ್ಯಾರೇಜ್ (ಭೀಮಾ ಏತ ನೀರಾವರಿ) | 25.24 |
| 24 | ಹಿಡಕಲ್ | 36.00 |
| 25 | ಮಾರ್ಕಂಡೇಯ | 70.00 |
| 26 | ಹಿಪ್ಪರಗಿ ಬ್ಯಾರೇಜ್ | 15.00 |
| 27 | ಮಲಪ್ರಭಾ | 1,002.86 |
| 28 | ಹರಿನಾಲಾ | 20.89 |
| 29 | ಅರೆಬೆಂಚಿ | - |
| 30 | ತುಂಗಭದ್ರಾ | 2,307.27 |
| 31 | ಹಗರಿಬೊಮ್ಮನಹಳ್ಳಿ | 17.79 |
| 32 | ನಾರಿಹಳ್ಳ | 8.64 |
| 33 | ಮಸ್ಕಿನಾಲಾ | 18.01 |
| 34 | ಕನಕನಾಲಾ | 12.39 |
| 35 | ಹಿರೇಹಳ್ಳ | 99.36 |

*****

# ಅನುಬಂಧ-2

## ಕಾವೇರಿ ನೀರಾವರಿ ನಿಗಮ ನಿಯಮಿತ

| ಕ್ರ.ಸಂ | ಅಣೆಕಟ್ಟು ಹೆಸರು | 2025-26ನೇ ಸಾಲಿನಲ್ಲಿ ಡ್ಯಾಂಗಳ ಸುರಕ್ಷತೆ, ಪುನರುಜ್ಜೀವನ, ಸುಧಾರಣೆ ಮತ್ತು ನಿರ್ವಹಣೆಗಾಗಿ ಖರ್ಚಾದ ಅನುದಾನ (ರೂ. ಕೋಟಿಗಳಲ್ಲಿ) | | |
|---|---|---|---|---|
| | | 4701 | 2701 | DRIP |
| 1 | ಕೆ.ಆರ್.ಎಸ್.ಜಲಾಶಯ | 6.08 | 0.78 | 12.97 |
| 2 | ಮಂಚನಬೆಲೆ ಜಲಾಶಯ | | 0.53 | |
| 3 | ಅರ್ಕಾವತಿ ಜಲಾಶಯ | | 0.53 | |
| 4 | ಇಗ್ಗಲೂರು ಜಲಾಶಯ | | 0.10 | |
| 5 | ಕಣ್ವ ಜಲಾಶಯ | | 0.54 | |
| 6 | ಕಬಿನಿ ಜಲಾಶಯ | | 1.92 | 0.71 |
| 7 | ತಾರಕ ಜಲಾಶಯ | | 0.21 | 3.03 |
| 8 | ಹೆಬ್ಬಳ್ಳ ಜಲಾಶಯ | | 0.13 | 0.00 |
| 9 | ನುಗು ಜಲಾಶಯ | | 0.22 | |
| 10 | ಸುವರ್ಣಾವತಿ ಜಲಾಶಯ | | 0.13 | |
| 11 | ಚಿಕ್ಕಹೊಳೆ ಜಲಾಶಯ | | 0.20 | 0.02 |
| 12 | ನಲ್ಲೂರು ಅಮಾನಿಕೆರೆ | | 0.00 | |
| 13 | ಗುಂಡಾಲ್ ಜಲಾಶಯ | | 0.00 | |
| 14 | ಉಡುತೊರೆಹಳ್ಳ ಜಲಾಶಯ | | 0.00 | |
| 15 | ಹಾರಂಗಿ ಜಲಾಶಯ | | 1.64 | |
| 16 | ಚಿಕ್ಲಹೊಳೆ ಜಲಾಶಯ | | 0.15 | |
| 17 | ಹೇಮಾವತಿ ಜಲಾಶಯ | 0.00 | 0.98 | 0.26 |
| 18 | ವಾಟೆಹೊಳೆ ಜಲಾಶಯ | 0.01 | 0.39 | 0.00 |
| 19 | ಯಗಚಿ ಜಲಾಶಯ | 0.00 | 0.10 | 0.00 |
| 20 | ತೀತಾ ಜಲಾಶಯ | 0.00 | 0.15 | 0.00 |
| 21 | ಮಾರ್ಕೋನಹಳ್ಳಿ ಜಲಾಶಯ | 0.18 | 0.25 | 0.00 |
| 22 | ಮಂಗಳ ಜಲಾಶಯ | 0.00 | 0.15 | 0.00 |
| | **ಒಟ್ಟು** | **6.27** | **9.11** | **16.99** |

# ಅನುಬಂಧ-3

## ಕರ್ನಾಟಕ ನೀರಾವರಿ ನಿಗಮ ನಿಯಮಿತ

| ಕ್ರ. ಸಂ | ಡ್ಯಾಂಗಳ ಹೆಸರು | ಜೂನ್ -2024 ರಿಂದ ಮೇ-2025 (Watering Year) ರವರೆಗೆ ಡ್ಯಾಂನಿಂದ ರೈತರಿಗೆ ಬಿಡುಗಡೆ ಮಾಡಲಾದ ನೀರಿನ ಪ್ರಮಾಣ (ಟಿ.ಎಂ.ಸಿ ಗಳಲ್ಲಿ) | ಫಲಾನುಭವಿಗಳ ಸಂಖ್ಯೆ | ಷರಾ |
|---|---|---|---|---|
| 1 | ತುಂಗಾ | 15.19 | 115147 | Including Tunga Anicut Canals |
| 2 | ಅಂಜನಾಪುರ | 1.13 | 6638 | |
| 3 | ಅಂಬ್ಲಿಗೋಳ | 0.43 | 2457 | Including Sheelavantanakoppa Doddakere |
| 4 | ಶೀಲವಂತನಕೊಪ್ಪ ದೊಡ್ಡಕೆರೆ | | | |
| 5 | ಧರ್ಮಾ | 0.67 | 6000 | |
| 6 | ಹಾಯ್‌ಹೊಳೆ | 0.46 | 960 | |
| 7 | ಮದಗ-ಮಾಸೂರು | 0.96 | 950 | |
| 8 | ಭದ್ರಾ | 68.69 | 121895 | Including D.B Kere Pickup |
| 9 | ಡಿ.ಬಿ. ಕೆರೆ | | | |
| 10 | ಜಂಬದಹಳ್ಳ | 0.20 | 813 | |
| 11 | ಭೀಮಸಮುದ್ರ | - | - | |
| 12 | ವಾರಾಹಿ ಡೈವರ್ಷನ್ ವಿಯರ್ | 8.09 | 6440 | |
| 13 | ಬೆಣ್ಣೆತೋರ | 0.943 | 12,532 | |
| 14 | ಚಂದ್ರಂಪಳ್ಳಿ | 0.45 | 975 | |
| 15 | ಹತ್ತಿಕುಣಿ | 0.096 | 636 | |
| 16 | ಸೌದಾಗರ | 0.090 | 583 | |
| 17 | ಅಮರ್ಜಾ | 0.171 | 2550 | |
| 18 | ಗಂಡೋರಿನಾಲಾ | 0.678 | 7600 | |
| 19 | ಕೆಳದಂಡೆಮುಲ್ಲಾಮಾರಿ | 0.9 | 5600 | |
| 20 | ಕಾರಂಜಾ | 0.93 | 4702 | |
| 21 | ಚುಳಿಕಿನಾಲಾ | - | - | ಕಾಲುವೆಗಳಲ್ಲಿ ನೀರು ಹರಿಸಿರುವುದಿಲ್ಲ. |
| 22 | ಮೇಲ್ದಂಡೆ ಮುಲ್ಲಾಮಾರಿ | 0.294 | 3280 | |
| 23 | ಸೊನ್ನಾ ಬ್ಯಾರೇಜ್ | 3.88 | 2,50,248 | |

| ಕ್ರ. ಸಂ | ಡ್ಯಾಂಗಳ ಹೆಸರು | ಜೂನ್ -2024 ರಿಂದ ಮೇ-2025 (Watering Year) ರವರೆಗೆ ಡ್ಯಾಂನಿಂದ ರೈತರಿಗೆ ಬಿಡುಗಡೆ ಮಾಡಲಾದ ನೀರಿನ ಪ್ರಮಾಣ (ಟಿ.ಎಂ.ಸಿ ಗಳಲ್ಲಿ) | ಫಲಾನುಭವಿಗಳ ಸಂಖ್ಯೆ | ಷರಾ |
|---|---|---|---|---|
| | (ಭೀಮಾ ಏತ ನೀರಾವರಿ) | | | |
| 24 | ಹಿಡಕಲ್ | 47.283 | 282652 | |
| 25 | ಮಾರ್ಕಂಡೇಯ | 3.10 | 8500 | |
| 26 | ಹಿಪ್ಪರಗಿ ಬ್ಯಾರೇಜ್ | 10.59 | 632014 | |
| 27 | ಮಲಪ್ರಭಾ ಯೋಜನೆ | 17.70 | 165392 | |
| 28 | ತುಂಗಭದ್ರಾ | 92.731 | 1183362 | |
| 29 | ಹಗರಿಬೊಮ್ಮನಹಳ್ಳಿ | - | 40400 | |
| 30 | ನಾರಿಹಳ್ಳ | 0.216 | 2000 | |
| 31 | ಮಸ್ಕಿನಾಲಾ | 0.73 | 11433 | |
| 32 | ಕನಕನಾಲಾ | 0.12 | 766 | |
| 33 | ಹಿರೇಹಳ್ಳ | 2.27 | 4200 | |

*****

# ಅನುಬಂಧ-4

## ಕಾವೇರಿ ನೀರಾವರಿ ನಿಗಮದಡಿಯ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಲ್ಲಿ ಉಪಯೋಗಿಸಿರುವ ನೀರಿನ ಪ್ರಮಾಣ Cropped area ವಿವರಗಳು

| ಕ್ರ. ಸಂ. | ಡ್ಯಾಂ ಹೆಸರು | Utilization details (In TMC) | Cropped area |
|---|---|---|---|
| | **ಬೃಹತ್ ನೀರಾವರಿ ಯೋಜನೆ** | | |
| 1 | ಹಾರಂಗಿ | 8.17 | 99.000 |
| 2 | ಕೆ.ಆರ್.ಎಸ್ | 29.45 | 201.222 |
| 3 | ಕಬಿನಿ | 11.67 | 108.060 |
| 4 | ಹೇಮಾವತಿ | 44.8 | 561.000 |
| | **ಮಾಧ್ಯಮ ನೀರಾವರಿ ಯೋಜನೆ** | | |
| 5 | ಸುವರ್ಣಾವತಿ | 0.66 | 4.500 |
| 6 | ಕಣ್ವ | 0 | |
| 7 | ಇಗ್ಗಲೂರು | 0.5087 | 3.650 |
| 8 | ಅರ್ಕಾವತಿ | 0.8074 | 7.500 |
| 9 | ಮಂಚನಬೆಲೆ | 0 | |
| 10 | ಹೆಬ್ಬಳ್ಳ | 0.611 | 3.050 |
| 11 | ನುಗು | 3.496 | 18.110 |
| 12 | ಚಿಕ್ಕಹೊಳೆ | 0 | |
| 13 | ಗುಂಡಾಲ್ | 0.674 | 7.100 |
| 14 | ನಲ್ಲೂರು ಅಮಾನಿಕೆರೆ | 0 | |
| 15 | ಚಿಕ್ಲಿಹೊಳೆ | 0.25 | 4.200 |
| 16 | ತಾರಕಾ | 1.13 | 17.400 |
| 17 | ಉಡುತೊರೆಹಳ್ಳ | 0 | |
| 18 | ವಾಟೆಹೊಳೆ | 0.657 | 9.000 |
| 19 | ಯಗಚಿ | 1.06 | 31.400 |
| 20 | ತೀತಾ | 0 | 1214.000 |
| 21 | ಮಾರ್ಕೋನಹಳ್ಳಿ | 1.918 | 15.000 |
| 22 | ಮಂಗಳ | 0.671 | 4.040 |

## ಅನುಬಂಧ-5

## ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

ಕೃಷ್ಣಾ ಭಾಗ್ಯ ಜಲ ನಿಗಮದ ಅಣೆಕಟ್ಟು ವಲಯ ಆಲಮಟ್ಟಿ ವ್ಯಾಪ್ತಿಯಲ್ಲಿ ಕೃಷ್ಣಾ ನ್ಯಾಯಾಧೀಕರಣ ತೀರ್ಪು-1 ರನ್ವಯ ಕೃ.ಮೇ.ಯೋ. ಹಂತ-1 & 2 ಗಳನ್ನು ಅನುಷ್ಠಾನಗೊಳಿಸಲು ಒಟ್ಟಾರೆ 173 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿದ್ದು, ಅದರಲ್ಲಿ ನೀರಾವರಿಗಾಗಿ 147 ಟಿ.ಎಂ.ಸಿ. ನೀರಾವರಿಗಾಗಿ ಕಾಯ್ದಿರಿಸಲಾಗಿದೆ.

ಆಲಮಟ್ಟಿ ಅಣೆಕಟ್ಟಿಗೆ ಸಂಬಂಧಪಟ್ಟಂತೆ, ಒಟ್ಟಾರೆ ಶೇಖರಣೆ ಸಾಮರ್ಥ್ಯವು 123.08 ಟಿ.ಎಂ.ಸಿ. ಇದ್ದು, ಅದರಲ್ಲಿ ಜೀವ ಜಲವಾದ 105.461 ಟಿ.ಎಂ.ಸಿ. ಇರುತ್ತದೆ. ಒಟ್ಟು 4,90,427.00 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದ್ದು, ಅದರ ಪೈಕಿ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1, 2 ಹಾಗೂ ಇದರಡಿ ಬರುವ ಉಳಿತಾಯದ ನೀರಿನಲ್ಲಿ ಮತ್ತು ಕೃಷ್ಣಾ ಕೊಳ್ಳದ ನೀರಿನ ಹಂಚಿಕೆಯಲ್ಲಿ ಒಟ್ಟು 1,12,710.69 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದ್ದು, ಅದಕ್ಕಾಗಿ ಸುಮಾರು 15 ಟಿ.ಎಂ.ಸಿ. ನೀರನ್ನು ಪ್ರತಿ ವರ್ಷವು (ಹಿಂಗಾರು & ಮುಂಗಾರು ಅನುಗುಣವಾಗಿ) ಕೃ.ಮೇ.ಯೋ. ನೀರಾವರಿ ಸಲಹಾ ಸಮಿತಿ ನಿರ್ದೇಶನದಂತೆ ನೀರಾವರಿಗಾಗಿ ನೀರನ್ನು ಹರಿಸಲಾಗಿರುತ್ತದೆ. ಬಾಕಿ ಉಳಿದಂತೆ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಹಾಗೂ ಹಂತ-3ರ ಉಳಿತಾಯದ ನೀರಿನಲ್ಲಿ ಕೈಗೊಂಡ ಯೋಜನೆಗಳು ಪ್ರಗತಿ ಹಂತದಲ್ಲಿರುವುದರಿಂದ, ಸದರಿ ಯೋಜನೆಗಳು ಪೂರ್ಣಗೊಂಡ ನಂತರ 3,44,179.00 ಹೆ. ಪ್ರದೇಶವು ನೀರಾವರಿಗೆ ಒಳಪಡಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಆಲಮಟ್ಟಿ ಜಲಾಶಯದಿಂದ ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳ ಜನರಿಗೆ ಕುಡಿಯುವ ನೀರಿನ ಸರಬರಾಜು ಮಾಡಲಾಗುತ್ತಿದೆ.

ನಾರಾಯಣಪೂರ ಜಲಾಶಯವು (Balancing Reservoir) ಸಮತೋಲನ ಜಲಾಶಯವಾಗಿದ್ದು, ವಿಜಯಪುರ, ಬಾಗಲಕೋಟೆ, ರಾಯಚೂರು, ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳ ಸುಮಾರು 5.91 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಸದರಿ ಜಲಾಶಯದಿಂದ ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಯಾದಗಿರಿ ಮತ್ತು ಕಲಬುರ್ಗಿ ಜಿಲ್ಲೆಗಳ ಜನರಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ.